# ಕ್ಯಾಂಪಸ್ ನೇಮಕಾತಿಯಲ್ಲಿ ದಾಖಲೆ

Nagaravani 29-03-2022

# ಬಿಐಇಟಿ.ಯ 450 ವಿದ್ಯಾರ್ಥಿಗಳಿಗೆ ಉದ್ಯೋಗ



ದಾವಣಗೆರೆ: ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಈ ವರ್ಷ ಕ್ಯಾಂಪಸ್ ನೇಮಕಾತಿ ದಾಖಲೆಯನ್ನು ನಿರ್ಮಾಣ ಮಾಡಿದೆ. ದೇಶ-ವಿದೇಶದಲ್ಲಿ ಶಾಖೆಗಳನ್ನು ಹೊಂದಿರುವ ಅನೇಕ ಪ್ರತಿಷ್ಠಿತ ಕಂಪನಿಗಳು ಬಿ.ಐ.ಇ.ಟಿ.ಗೆ ಭೇಟಿ ನೀಡಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿವೆ. ಈ ಶೈಕ್ಷಣಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲೇ ಸುಮಾರು 450 ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ಆಯ್ಕೆಯಾಗಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ॥ ಎಚ್‌ಬಿ ಅರವಿಂದ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಕ್ವೆಸ್ಟ್‌ಗ್ಲೋಬಲ್ ಕಂಪನಿ 23 ವಿದ್ಯಾರ್ಥಿಗಳನ್ನು ಅಯ್ಕೆ ಮಾಡಿದರೆ, ದೇಶದ ಅತ್ಯಂತ ಪ್ರತಿಷ್ಠಿತ ಕಂಪನಿಯಾದ ವಿಪ್ರೋ 65 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ದಾಖಲೆಯ ನೇಮಕಾತಿಯನ್ನು ಮಾಡಿದೆ. ಉದ್ಯೋಗಾರ್ಥಿಗಳ ಕನಸಿನ ಟಾಟಾ ಕನ್ಸಲ್ಟನ್ಸಿ ಸರ್ವೀಸಸ್ (ಟಿಸಿಎಸ್) 40 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದರೆ, ಅರ್ನಸ್ಟ್ ಆಂಡ್ ಯಂಗ್ ಕಂಪನಿಯು 49 ವಿದ್ಯಾರ್ಥಿಗಳಿಗೆ ನೇಮಕಾತಿ ಮಾಡಿದೆ. ಎಸ್.ಎಲ್.ಕೆ. ಸಾಫ್ಟವೇರ್ ಸಲ್ಯೂಷನ್ಸ ಕಂಪನಿಯು15 ವಿದ್ಯಾರ್ಥಿಗಳನ್ನು ನೇಮಿಸಿಕೊಂಡರೆ ಕ್ಯಾಪ್ಜೆಮಿನಿ ಕಂಪನಿಯು 10 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದೆ ಎಂದು ತಿಳಿಸಿದ್ದಾರೆ.

ಬ್ರಿಟಿಷ್-ಡಚ್ ಕಂಪನಿಯಾದ ಕೆ.ಪಿ.ಎಮ್.ಜಿ. 34 ವಿದ್ಯಾರ್ಥಿಗಳನ್ನು ಅಯ್ಕೆ ಮಾಡಿದೆ. ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಸಿಲ್ವರ್‌ಪೀಕ್ ಗ್ಲೋಬಲ್ ಕಂಪನಿಯು 16 ವಿದ್ಯಾರ್ಥಿಗಳನ್ನು ನಿಯೋಜಿಸಿಕೊಂಡಿದೆ. ಹೇರಿನ್ ಇಲೆಕ್ಟ್ರಾನಿಕ್ಸ್ ಕಂಪನಿಯು 17 ವಿದ್ಯಾರ್ಥಿಗಳನ್ನು ನಿಯೋಜಿಸಿಕೊಂಡರೆ ಜೆನ್ಸಾರ್ 12 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿವೆ. ಐನ್ಯೂಬ್ ಕಂಪನಿಗೆ 13 ವಿದ್ಯಾರ್ಥಿಗಳು ಆಯ್ಕೆಗೊಂಡಿದ್ದಾರೆ. ಜಪಾನ್ ಕಂಪನಿಯಾದ ರಾಕೂಟೆನ್ ನಾಲ್ವರು ವಿದ್ಯಾರ್ಥಿಗಳನ್ನು ನಿಯೋಜಿಸಿಕೊಂಡಿದೆ. ಇದಲ್ಲದೇ ಗ್ರೇನ್-ಟೆಕ್, ಶಶಿ ಎಕ್ಸ್‌ಪೋರ್ಟ್, ರೋಬೋಸಾಫ್ಟ್, ಮಾಪಲ್ ಲ್ಯಾಬ್ಸ್, ಜಿಗ್‌ಸ್ಕೈ, ಆಲ್ಟಿಮೆಟ್ರಿಕ್, ಕಾಗ್ನಿಜೆಂಟ್, ಮೈಂಡ್‌ಟ್ರೀ, ವಿಲ್ಲೀಎಮ್‌ಥ್ರೀ, ಮಿಡಲ್‌ಬೈ, ಫಸ್ಟ್ ಅಮೇರಿಕನ್ ಇಂಡಿಯಾ, ಆಲ್ಟ ಡಿಜಿಟಲ್, ಇತ್ಯಾದಿ ಕಂಪನಿಗಳು ಕ್ಯಾಂಪಸ್ ನಿಯೋಜನೆಯಲ್ಲಿ ನೂರಾರು ವಿದ್ಯಾರ್ಥಿಗಳನ್ನು ಅಯ್ಕೆ ಮಾಡಿಕೊಂಡಿದೆ ಎಂದು ತಿಳಿಸಿದ್ದಾರೆ.

ಈ ಬಾರಿಯ ಕ್ಯಾಂಪಸ್ ನೇಮಕಾತಿಯಲ್ಲಿ, ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದಂತಾಗಿದೆ. ಕ್ಯಾಂಪಸ್ ನಿಯೋಜನೆಯಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಾರ್ಷಿಕ ವೇತನ 4 ಲಕ್ಷದಿಂದ 35 ಲಕ್ಷಗಳವರೆಗೆ ನಿಯುಕ್ತಿಗೊಂಡಿದ್ದು, ಇದೂ ಕೂಡಾ ಒಂದು ದಾಖಲೆಯಾಗಿದೆ ಎಂದಿದ್ದಾರೆ.

ಬಿ.ಐ.ಇ.ಟಿ. ಕಾಲೇಜಿನ ಈ ಸಾಧನೆಯನ್ನು ಬಾಪೂಜಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ॥ ಶಾಮನೂರು ಶಿವಶಂಕರಪ್ಪ ಹಾಗೂ ಜಂಟೀ ಕಾರ್ಯದರ್ಶಿ ಎಸ್.ಎಸ್.ಮಲ್ಲಿಕಾರ್ಜುನ ಅವರು ಅಭಿನಂದಿಸಿದ್ದಾರೆ.

# ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಉದ್ಯೋಗ ನೇಮಕಾತಿ ಪರ್ವ

vijayavani 29-03-2022



ದೇಶ, ವಿದೇಶಗಳಲ್ಲಿ ಶಾಖೆಗಳನ್ನು ಹೊಂದಿರುವ ವಿವಿಧ ಪ್ರತಿಷ್ಠಿತ ಕಂಪನಿಗಳಿಗೆ ಕ್ಯಾಂಪಸ್ ನೇಮಕಾತಿಯಲ್ಲಿ ಆಯ್ಕೆಯಾಗಿರುವ ದಾವಣಗೆರೆಯ ಬಿಐಇಟಿ ಕಾಲೇಜು ವಿದ್ಯಾರ್ಥಿಗಳು. ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ, ಡಾ. ಸಿ.ಆರ್. ನಿರ್ಮಲಾ, ಡಾ. ಜಿ.ಪಿ. ದೇಸಾಯಿ ಚಿತ್ರದಲ್ಲಿದ್ದಾರೆ.

**ದಾವಣಗೆರೆ:** ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಈ ವರ್ಷ ಕ್ಯಾಂಪಸ್ ನೇಮಕಾತಿ ದಾಖಲೆ ನಿರ್ಮಾಣ ಮಾಡಿದ್ದು, ಪ್ರಸ್ತುತ ಶೈಕ್ಷಣಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲೇ 450 ವಿದ್ಯಾರ್ಥಿಗಳು ವಿವಿಧ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ.

ದೇಶ ವಿದೇಶಗಳಲ್ಲಿ ಶಾಖೆಗಳನ್ನು ಹೊಂದಿರುವ ಅನೇಕ ಪ್ರತಿಷ್ಠಿತ ಕಂಪನಿಗಳು ಬಿಐಇಟಿಗೆ ಭೇಟಿ ನೀಡಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿವೆ ಎಂದು ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ, ನಿಯೋಜನಾ ಡೀನ್ ಡಾ. ಸಿ.ಆರ್. ನಿರ್ಮಲಾ, ಸಾರ್ವಜನಿಕ ಸಂಪರ್ಕ ಡೀನ್ ಡಾ. ಜಿ.ಪಿ. ದೇಸಾಯಿ ತಿಳಿಸಿದ್ದಾರೆ.

ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಕ್ವೆಸ್ಟ್ ಗ್ಲೋಬಲ್ ಕಂಪನಿ 23 ವಿದ್ಯಾರ್ಥಿಗಳನ್ನು, ವಿಪ್ರೋ ಕಂಪನಿ 65 ಅಭ್ಯರ್ಥಿಗಳನ್ನು ಆಯ್ಕೆ ಮಾಡಿವೆ. ಟಾಟಾ ಕನ್ಸಲ್ಟನ್ಸಿ ಸರ್ವೀಸಸ್ (ಟಿಸಿಎಸ್) 40, ಅರ್ನಸ್ಟ್ ಆ್ಯಂಡ್ ಎಂಗ್ ಕಂಪನಿ 49, ಎಸ್.ಎಲ್.ಕೆ. ಸಾಫ್ಟ್‌ವೇರ್ ಸಲ್ಯೂಷನ್ಸ್ ಕಂಪನಿಯು 15, ಕ್ಯಾಪ್ಜೆಮಿನಿ ಕಂಪನಿಯು 10 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದೆ ಎಂದು ಹೇಳಿದ್ದಾರೆ.

ಬ್ರಿಟಿಷ್-ಡಚ್ ಕಂಪನಿಯಾದ ಕೆ.ಪಿ.ಎಂ.ಜಿ. 34, ಸಿಲ್ವರ್‌ಪೀಕ್ ಗ್ಲೋಬಲ್ ಕಂಪನಿಯು 16, ಹೇರಿನ್ ಇಲೆಕ್ಟಾನಿಕ್ಸ್ ಕಂಪನಿಯು 17, ಜೆನ್ಸಾರ್ 12, ಐನ್ಯೂಬ್ ಕಂಪನಿಗೆ 13 ವಿದ್ಯಾರ್ಥಿಗಳು ಆಯ್ಕೆಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಜಪಾನ್ ಕಂಪನಿ ರಾಕೂಟೆನ್ ನಾಲ್ವರನ್ನು, ಗ್ರೇನ್-ಟೆಕ್, ಶಶಿ ಎಕ್ಸ್‌ಪೋರ್ಟ್, ರೋಬೋಸಾಫ್ಟ್, ಮಾಪಲ್ ಲ್ಯಾಬ್ಸ್, ಜಿಗ್ ಸೈ, ಆಲ್ಟಿಮೆಟ್ರಿಕ್, ಕಾಗ್ನಿಜೆಂಟ್, ಮೈಂಡ್‌ಟ್ರೀ, ವಿಲ್ಲೇಎಮ್‌ಥ್ರೀ, ಮಿಡಲ್‌ಬೈ, ಫಸ್ಟ ಅಮೆರಿಕನ್ ಇಂಡಿಯಾ, ಆಲ್ಟ ಡಿಜಿಟಲ್ ಇತ್ಯಾದಿ ಕಂಪನಿಗಳು ಕ್ಯಾಂಪಸ್ ನಿಯೋಜನೆಯಲ್ಲಿ ನೂರಾರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿವೆ. ಈ ಬಾರಿಯ ನೇಮಕಾತಿಯಲ್ಲಿ ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ವಿವರಿಸಿದ್ದಾರೆ.

ಕ್ಯಾಂಪಸ್ ನಿಯೋಜನೆಯಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿಗಳ ವಾರ್ಷಿಕ ವೇತನ 4 ಲಕ್ಷದಿಂದ 35 ಲಕ್ಷ ರೂ. ವರೆಗೆ ಇದ್ದು, ಇದೂ ಒಂದು ದಾಖಲೆಯಾಗಿದೆ ಎಂದು ಹೇಳಿದ್ದಾರೆ.

ಕಾಲೇಜಿನ ಈ ಸಾಧನೆಯ ಬಗ್ಗೆ ಬಾಪೂಜಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಹರ್ಷ ವ್ಯಕ್ತಪಡಿಸಿದ್ದಾರೆ.

# ಬಿಐಇಟಿ ಕಾಲೇಜಿನಲ್ಲಿ ಉದ್ಯೋಗ ನೇಮಕಾತಿ ಪರ್ವ

Janathavani 29-03-2022



ದಾವಣಗೆರೆ, ಮಾ.28-ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಈ ವರ್ಷ ಕ್ಯಾಂಪಸ್ ನೇಮಕಾತಿ, ದಾಖಲೆ ನಿರ್ಮಾಣ ಮಾಡಿದೆ. ದೇಶ-ವಿದೇಶದಲ್ಲಿ ಶಾಖೆಗಳನ್ನು ಹೊಂದಿರುವ ಅನೇಕ ಪ್ರತಿಷ್ಠಿತ ಕಂಪನಿಗಳು ಬಿ.ಐ.ಇ.ಟಿ.ಗೆ ಭೇಟಿ ನೀಡಿ, ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿವೆ. ಈ ಶೈಕ್ಷಣಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲೇ ಸುಮಾರು 450 ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ಆಯ್ಕೆಯಾಗಿದ್ದಾರೆ.

ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಕ್ವೆಸ್ಟ್ ಗ್ಲೋಬಲ್ ಕಂಪನಿ 23 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದರೆ, ದೇಶದ ಅತ್ಯಂತ ಪ್ರತಿಷ್ಠಿತ ಕಂಪನಿಯಾದ ವಿಪ್ರೋ 65 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ದಾಖಲೆಯ ನೇಮಕಾತಿಯನ್ನು ಮಾಡಿದೆ.

## ನಾಲ್ಕು ತಿಂಗಳಲ್ಲೇ 450 ವಿದ್ಯಾರ್ಥಿಗಳು ವಿವಿಧ ಕಂಪನಿಗಳಿಗೆ ಆಯ್ಕೆ

ಉದ್ಯೋಗಾರ್ಥಿಗಳ ಕನಸಿನ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ 40, ಅರ್ನಸ್ಟ್ ಅಂಡ್ ಎಂಗ್ ಕಂಪನಿಯು 49, ಎಸ್.ಎಲ್.ಕೆ. ಸಾಫ್ಟ್‌ವೇರ್ ಸಲ್ಯೂಷನ್ಸ್ ಕಂಪನಿಯು 15, ಕ್ಯಾಪ್ಜೆಮಿನಿ ಕಂಪನಿಯು 10, ಬ್ರಿಟಿಷ್-ಡಚ್ ಕಂಪನಿಯಾದ ಕೆ.ಪಿ.ಎಮ್.ಜಿ. 34 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದೆ.

ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಸಿಲ್ವರ್‌ಪೀಕ್ ಗ್ಲೋಬಲ್ ಕಂಪನಿಯು 16, ಹೇರಿನ್ ಇಲೆಕ್ಟ್ರಾನಿಕ್ಸ್ ಕಂಪನಿಯು 17, ಜೆನ್ಪ್ಯಾರ್ 12, ಐನ್ಯೂಬ್ ಕಂಪನಿಗೆ 13, ಜಪಾನ್ ಕಂಪನಿ ರಾಕೂಟೆನ್ ನಾಲ್ವರು ವಿದ್ಯಾರ್ಥಿಗಳನ್ನು ನಿಯೋಜಿಸಿಕೊಂಡಿದೆ.

ಇದಲ್ಲದೇ ಗ್ರೇನ್-ಟೆಕ್, ಶಶಿ ಎಕ್ಸ್‌ಪೋರ್ಟ್, ರೋಬೋಸಾಫ್ಟ್, ಮಾಪಲ್ ಲ್ಯಾಬ್ಸ್, ಜಿಗ್‌ಸ್ಕೈ, ಆಲ್ಫಿಮೆಟ್ರಿಕ್, ಕಾಗ್ನಿಜೆಂಟ್, ಮೈಂಡ್‌ಟ್ರೀ, ವಿಲ್ಲೇಎಮ್‌ಥ್ರೀ, ಮಿಡಲ್‌ಬೈ, ಫಸ್ಟ್ ಅಮೇರಿಕನ್ ಇಂಡಿಯಾ, ಆಲ್ಟ ಡಿಜಿಟಲ್, ಇತ್ಯಾದಿ ಕಂಪನಿಗಳು ಕ್ಯಾಂಪಸ್ ನಿಯೋಜನೆಯಲ್ಲಿ ನೂರಾರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿವೆ.

ಈ ಬಾರಿಯ ಕ್ಯಾಂಪಸ್ ನೇಮಕಾತಿಯಲ್ಲಿ, ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದಂತಾಗಿದೆ. ಕ್ಯಾಂಪಸ್ ನಿಯೋಜನೆಯಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಾರ್ಷಿಕ ವೇತನ 4 ಲಕ್ಷದಿಂದ 35 ಲಕ್ಷಗಳವರೆಗೆ ನಿಯುಕ್ತಿಗೊಂಡಿದ್ದು, ಇದೂ ಕೂಡಾ ಒಂದು ದಾಖಲೆಯಾಗಿದೆ ಎಂದು ಪ್ರಾಂಶುಪಾಲ ಡಾ. ಎಚ್.ಬಿ ಅರವಿಂದ್ ತಿಳಿಸಿದ್ದಾರೆ

ಕಾಲೇಜಿನ ಈ ಸಾಧನೆಗೆ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ ಶಾಸಕ ಡಾ॥ ಶಾಮನೂರು ಶಿವಶಂಕರಪ್ಪ, ಜಂಟಿ ಗೌರವ ಕಾರ್ಯದರ್ಶಿ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಅಭಿನಂದಿಸಿದ್ದಾರೆ.

Vijayakarnataka 29-03-2022

# ಬಿಐಇಟಿ 450 ವಿದ್ಯಾರ್ಥಿಗಳು ಆಯ್ಕೆ

■ **ವಿಕ ಸುದ್ದಿಲೋಕ** ದಾವಣಗೆರೆ

ನಗರದ ಬಾಪೂಜಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಈ ಶೈಕ್ಷಣಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಕ್ಯಾಂಪಸ್ ಆಯ್ಕೆಯಲ್ಲಿ 450 ವಿದ್ಯಾರ್ಥಿಗಳು ನಾನಾ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ. ದೇಶ-ದೇಶದಲ್ಲಿ ಶಾಖೆಗಳನ್ನು ಹೊಂದಿರುವ ಅನೇಕ ಪ್ರತಿಷ್ಠಿತ ಕಂಪನಿಗಳು ಆಗಮಿಸಿದ್ದು ಒಂದು ದಾಖಲೆಯಾಗಿದೆ ಎಂದು ಪ್ರಾಚಾರ್ಯ ಎಚ್.ಬಿ. ಅರವಿಂದ್ ತಿಳಿಸಿದ್ದಾರೆ.

ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಕ್ವೆಸ್ಟ್‌ಗ್ಲೋಬಲ್ ಕಂಪನಿಗೆ 23 ವಿದ್ಯಾರ್ಥಿಗಳು, ದೇಶದ ಪ್ರತ್ರಿತ ಕಂಪನಿಯಾದ ವಿಪ್ರೋ 65 ಗೆ ವಿದ್ಯಾರ್ಥಿಗಳನ್ನು ಆಯ್ಕೆಯಾಗಿ ದಾಖಲೆಯ ನೇಮಕಾತಿ ನಡೆದಿದೆ. ಉದ್ಯೋಗಾರ್ಥಿಗಳ ಕನಸಿನ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ಗೆ 40, ಅರ್ನಸ್ಟ್ ಆಂಡ್ ಎಂಗ್ ಕಂಪನಿಗೆ 49, ಎಸ್ ಎಲ್‌ಕೆ. ಸಾಫ್ಟ್‌ವೇರ್ ಸಲ್ಯೂಷನ್ಸ್ ಕಂಪನಿ15 ದ್ಯಾರ್ಥಿಗಳನ್ನು ನೇಮಿಸಿಕೊಂಡಿದೆ ಎಂದು ತಿಳಿಸಿದ್ದಾರೆ.

ಕ್ಯಾಪ್ಜೆ ಕಂಪನಿ 10, ಬ್ರಿಟಿಷ್-ಡಚ್ ಕಂಪನಿ ಕೆಪಿಎಮ್‌ಜಿ 34, ಭಾರತ ಸರಕಾರದಿಂದ ಮಾನ್ಯತೆ ಪಡೆದ ಸಿಲ್ವರ್ ಪೀಕ್ ಗ್ಲೋಬಲ್ ಕಂಪನಿ 16, ಹೇರಿನ್ ಇಲೆಕ್ಟ್ರಾನಿಕ್ಸ್ ಕಂಪನಿಯು 17, ಜೆನ್ಸಾರ್ 12, ಐನ್ಯೂಬ್ ಕಂಪನಿಗೆ 13 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಅಂಕಿಸಂಖ್ಯೆ ನೀಡಿದ್ದಾರೆ.

ಜಪಾನ್ ಕಂಪನಿಯಾದ ರಾಕೂಟೆನ್ 4 ವಿದ್ಯಾರ್ಥಿಗಳನ್ನು ನಿಯೋಜಿಸಿಕೊಂಡಿದೆ. ಇದಲ್ಲದೇ ಗ್ರೇನ್-ಟೆಕ್, ಶಶಿ ಎಕ್ಸಪೋರ್ಟ, ರೋಬೋಸಾಫ್ಟ್, ಮಾಪಲ್ ಲ್ಯಾಬ್ಸ, ಜಿಗ್‌ಸ್ಟೆ, ಆಲ್ಟಿಮೆಟ್ರಿಕ್, ಕಾಗ್ನಿಜೆಂಟ್, ಮೈಂಡ್ ಟ್ರೀ, ಲ್ಲೇಎಮ್‌ಥ್ರೀ, ಮಿಡಲ್‌ಬೈ, ಫಸ್ಟ ಅಮೇರಿಕನ್‌ಇಂಡಿಯಾ, ಆಲ್ಫ ಡಿಜಿಟಲ್ ಇತ್ಯಾದಿ ಕಂಪನಿಗಳು ಕ್ಯಾಂಪಸ್ ನಿಯೋಜನೆಯಲ್ಲಿ ನೂರಾರು ದ್ಯಾರ್ಥಿಗಳನ್ನು ಆಯ್ಕೆಮಾಡಿವೆ ಎಂದು ತಿಳಿಸಿದ್ದಾರೆ. ಬಿಐಇಟಿ ಕಾಲೇಜಿನ ಈ ಸಾಧನೆಯನ್ನು ಬಾಪೂಜಿ ವಿದ್ಯಾಸಂಸ್ಥೆ ಕಾರ್ಯದರ್ಶಿಗಳಾದ ಡಾ. ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ್ ಅಭಿನಂದಿಸಿದ್ದಾರೆ.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಕ್ಯಾಂಪಸ್ ನಿಯೋಜನೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು. .

## 4 ರಿಂದ 35 ಲಕ್ಷ ರೂ. ವೇತನ

ಕ್ಯಾಂಪಸ್ ನಿಯೋಜನೆಯಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿಗಳು ವಾರ್ಷಿಕ 4 ರಿಂದ 35 ಲಕ್ಷ ವೇತನ ಪಡೆಯಲಿದ್ದು ಇದು ಕೂಡ ದಾಖಲೆಯಾಗಿದೆ. ಈ ಬಾರಿಯ ಕ್ಯಾಂಪಸ್ ನೇಮಕಾತಿಯಲ್ಲಿ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದಂತಾಗಿದೆ ಎಂದು ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್ ತಿಳಿಸಿದ್ದಾರೆ.

# ಬಿಐಇಟಿಯ 450 ಮಂದಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ 30-03-2022

ದಾವಣಗೆರೆ: ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 450 ವಿದ್ಯಾರ್ಥಿಗಳು ಈ ವರ್ಷ ಕ್ಯಾಂಪಸ್ ನೇಮಕಾತಿಯಲ್ಲಿ ವಿವಿಧ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ.

'ಬಿಐಇಟಿ ಈ ವರ್ಷ ದಾಖಲೆಯನ್ನು ನಿರ್ಮಾಣ ಮಾಡಿದ್ದು, ದೇಶ-ವಿದೇಶಗಳಲ್ಲಿ ಶಾಖೆಗಳನ್ನು ಹೊಂದಿರುವ ಅನೇಕ ಪ್ರತಿಷ್ಠಿತ ಕಂಪನಿಗಳು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿವೆ' ಎಂದು ಡಾ. ಎಚ್.ಬಿ. ಅರವಿಂದ ತಿಳಿಸಿದ್ದಾರೆ.

'ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಕ್ರೈಸ್ಟ ಗ್ಲೋಬಲ್ ಕಂಪನಿಗೆ 23, ವಿಪ್ರೋ 65, ಟಾಟಾ ಕನ್ಸಲ್ಟನ್ಸಿ ಸರ್ವೀಸಸ್ (ಟಿಸಿಎಸ್) 40, ಅರ್ನಸ್ಟ್ ಅಂಡ್ ಎಂಗ್ ಕಂಪನಿಯು 49, ಎಸ್‌ಎಲ್‌ಕೆ ಸಾಫ್ಟ್‌ವೇರ್ ಸಲ್ಯೂಷನ್ಸ್ ಕಂಪನಿಯು 15, ಕ್ಯಾಪ್ಜೆಮಿನಿ ಕಂಪನಿಯು 10, ಕೆಪಿಎಂಜಿ 34 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದೆ' ಎಂದು ಹೇಳಿದ್ದಾರೆ.

'ಸಿಲ್ವರ್‌ಪೀಕ್ ಗ್ಲೋಬಲ್ ಕಂಪನಿಯು 16, ಹೇರಿನ್ ಎಲೆಕ್ಟ್ರಾನಿಕ್ಸ್ ಕಂಪನಿಯು 17, ಜೆನ್ಪಾರ್ 12 ಐನ್ಯೂಬ್ ಕಂಪನಿಗೆ 13, ಜಪಾನ್ ಕಂಪನಿಯಾದ ರಾಕೂಟೆನ್‌ಗೆ ನಾಲ್ವರು, ಇದಲ್ಲದೇ ಗ್ರೇನ್ ಟೆಕ್, ಶಶಿ ಎಕ್ಸ್‌ಪೋರ್ಟ್, ರೋಬೋಸಾಫ್ಟ್ ಇತ್ಯಾದಿ ಕಂಪನಿಗಳು ಪಾಲ್ಗೊಂಡಿದ್ದವು' ಎಂದು ಅವರು ತಿಳಿಸಿದ್ದಾರೆ.